**ಪ್ರಾಸಾ-3, ಶೇಖಪ್ಪ ಪವಾರ ರವರನ್ನು ರೂ.250/- ಗಳ ಖರ್ಚಿನ ಮೇರೆಗೆ ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು-30.12.2024.**

**ಪಾಟಿ ಸವಾಲುಃ ಶ್ರೀ ಎಂ.ಕೆ. ಚವಡಿ ವಕೀಲರಿಂದ, ಶ್ರೀ ಸಿ. ಎಸ್. ಸಂಕನಗೌಡರ, ಆರೋಪಿ ಪರ ವಕೀಲರ ಪರವಾಗಿಃ**

4. ಫೋಟೋಗಳನ್ನು ಯಾವ ತಾರೀಖಿನಂದು ತೆಗೆಯಲಾಗಿರುತ್ತದೆ ಎಂದರೆ ಸಾಕ್ಷಿಯು, ಈಗ ಎರಡು ವರ್ಷಗಳ ಹಿಂದೆ ತೆಗೆಯಲಾಗಿರುತ್ತದೆ ಎಂದುಹೇಳಿರುತ್ತಾರೆ. ಸಹಿ ಮಾಡುವುದಕ್ಕಿಂತ ಮೊದಲು ಪಂಚನಾಮೆಯನ್ನು ನಾನು ಓದಿರುವುದಿಲ್ಲ. ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಶವಕ್ಕೆ ಸಂಬಂಧಪಟ್ಟಂತೆ ಫೋಟೋಗಳನ್ನು ತೆಗೆಯಲಾಗಿರುತ್ತದೆ.

- 3 -

5. ಮು.ಮಾ. 2 ರಿಂದ 4 ರಂತಹ ಬಟ್ಟೆಗಳು ಎಲ್ಲರ ಮನೆಯಲ್ಲಿ ಇರುತ್ತವೆ ಎಂದರೆ ಸರಿ. ಸಾಕ್ಷಿ ಸ್ವತಃ ಅವುಗಳನ್ನು ನಾನು ಗುರುತಿಸಿರುತ್ತೇನೆ ಎಂದು ಹೇಳಿರುತ್ತಾರೆ. ಆ ದಿನ ನಾನು ಮದ್ಯಾಹ್ನ 01.00 ರಿಂದ 02.00 ರ ವರೆಗೆ ಇದ್ದೆನು.

6. ನನ್ನ ಸಮಕ್ಷಮ ಶವ ಪಂಚನಾಮೆಯನ್ನು ಮಾಡಿರುವುದಿಲ್ಲ ಮತ್ತು ಯಾವುದೇ ವಸ್ತುಗಳನ್ನು ಜಪ್ತ ಮಾಡಿರುವುದಿಲ್ಲ ಮತ್ತು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ಆರೋಪಿಯು ಗೋವಿನ ಜೋಳದ ವ್ಯಾಪಾರವನ್ನು ಮಾಡುತ್ತಿದ್ದನು ಎಂದರೆ ಸರಿ. ಆತನು ಆರ್ಥಿಕವಾಗಿ ಸದೃಢನಾಗುತ್ತಿದ್ದನು ಎಂದರೆ ಸರಿ. ಇದನ್ನು ಸಹಿಸದೇ ನಾನು ಆರೋಪಿ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ಸುಮಾರು 2 ವರ್ಷಗಳ ಹಿಂದೆ ಮುಂಡರಗಿ ಪೋಲೀಸರು ಮುಂಡರಗಿ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಮೃತ ಸೋಮಲೆಪ್ಪ ನಾಯಕ್ ಈತನ ಶವ ಪಂಚನಾಮೆಯನ್ನು ಮಾಡಿರುತ್ತಾರೆ ಮತ್ತು ನನ್ನ ಜೊತೆಗೆ ಚಾಸಾ-4 ರವರು ಸಹ ಹಾಜರಿದ್ದರು ಮತ್ತು ಚಾಸಾ-17 ರವರು ಹಾಜರಿದ್ದು, ಸದರಿ ಶವವು ಮೃತ ಸೋಮಲೆಪ್ಪ ನಾಯಕ್ ಇವರ ಶವವಿರುತ್ತದೆ ಎಂದು ಹೇಳಿರುತ್ತಾರೆ ಮತ್ತು ನಾನು ಶವವನ್ನು ಪರಿಶೀಲಿಸಿದಾಗ, ಗದ್ದಕ್ಕೆ, ಹೊಟ್ಟೆಗೆ, ಎಡಗೈ ಹಾಗೂ ಎದೆಯ ಮೇಲೆ ಚಾಕುವಿನಿಂದ ತಿವಿದ ಗಾಯಗಳಾಗಿದ್ದವು ಮತ್ತು ಕುತ್ತಿಗೆಗೆ ತೀವ್ರ ತರಹವಾದ ಗಾಯವಾಗಿತ್ತು ಮತ್ತು

ಅದರಿಂದ, ರಕ್ತ ಹೊರಗೆ ಬಂದಿತ್ತು ಮತ್ತು ಆ ರೀತಿಯಾಗಿ ಆರೋಪಿಯು ಚಾಕುವಿನಿಂದ ತಿವಿದು ಗಾಯಮಾಡಿರುತ್ತಾನೆ ಎಂದು ನನಗೆ ಗೊತ್ತಾಯಿತು ಮತ್ತು ಆಗ ಫೋಟೋಗಳನ್ನು ತೆಗೆಯಲಾಗಿರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಗದಗ**

**ಪ್ರಾಸಾ-7**

**ಪ್ರಾಸಾ-7, ಸುರೇಶ ನಾಯಕ ರವರನ್ನು ರೂ.200/- ಗಳ ಖರ್ಚಿನ ಮೇರೆಗೆ ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು-30.12.2024.**

**ಪಾಟಿ ಸವಾಲುಃ ಶ್ರೀ ಎಂ.ಕೆ. ಚವಡಿ ವಕೀಲರಿಂದ, ಶ್ರೀ ಸಿ. ಎಸ್. ಸಂಕನಗೌಡರ, ಆರೋಪಿ ಪರ ವಕೀಲರ ಪರವಾಗಿಃ**

10. ಈಗ ನಾನು ಹಾತಲಗೇರಿ ಗ್ರಾಮ ಪಂಚಾಯತಿಯಲ್ಲಿ ಪಿಡಿಓ ಆಗಿರುತ್ತೇನೆ ಹಾಗೂ ಗದಗನಲ್ಲಿ ವಾಸವಾಗಿರುತ್ತೇನೆ. ನನಗೆ ಫೋನ ಬಂದಾಗ ನಾನು ಗದಗನ ನಮ್ಮ ಮನೆಯಲ್ಲಿ ಇದ್ದೆನು. ಆರೋಪಿ ಊರಿನಲ್ಲಿ ಗೋವಿನ ಜೋಳದ ವ್ಯಾಪಾರ ಮಾಡುತ್ತಿದ್ದನು ಎಂದರೆ ನನಗೆ ಗೊತ್ತಿಲ್ಲ. ನಾನು



ಕಳೆದ 6 ವರ್ಷಗಳಿಂದ ಗದಗನಲ್ಲಿ ವಾಸ ಮಾಡುತ್ತಿದ್ದೇನೆ.

11. ನಮ್ಮ ಮನೆಯ ವಿಚಾರಕ್ಕೆ ಸಂಬಂಧಿಸಿದಂತೆ ಹತ್ತಿಕಟ್ಟಿ ತಾಂಡಾದಲ್ಲಿ ನಡೆಯುವ ಎಲ್ಲಾ ವಿಚಾರಗಳು ನನಗೆ ಗೊತ್ತಾಗುತ್ತವೆ. ಊರಿನ ವಿಚಾರಗಳು ನನಗೆ ಗೊತ್ತಾಗುವುದಿಲ್ಲ ಎಂದರೆ

ಸಾಕ್ಷಿಯು, ಸಾಮೂಹಿಕವಾಗಿದ್ದರೆ ಗೊತ್ತಾಗುತ್ತವೆ ಎಂದು ಹೇಳಿರುತ್ತಾರೆ.

12. ಘಟನೆ ನಡೆಯುವ ಸಮಯದಲ್ಲಿ ಸೇವಾಲಾಲ ದೇವಸ್ಥಾನದ ಕಟ್ಟಡ ಪೂರ್ಣವಾಗಿ ಒಂದು ವರ್ಷವಾಗಿತ್ತು. ಉದ್ಘಾಟನೆಗೆ ಸಂಬಂಧಿಸಿದಂತೆ ನನಗೆ ಪಟ್ಟಿಯನ್ನು ಹಾಕಬೇಕೆಂದು ಹತ್ತಿಕಟ್ಟಿ ಗ್ರಾಮದ ಹಿರಿಯರು ಈ ಘಟನೆಗೂ 6 ತಿಂಗಳು ಮೊದಲು ಕೇಳಿದ್ದರು.

13. ಗದಗ ಜಿಲ್ಲಾ ಆಸ್ಪತ್ರೆಯಲ್ಲಿ ನಾನು ರಾತ್ರಿ 11.00 ಗಂಟೆಯವರೆಗೆ ಇದ್ದೆನು. ಅಲ್ಲಿಂದ ನಾನು ಹತ್ತಿಕಟ್ಟಿಯ ನಮ್ಮ ಮನೆಗೆ ಹೋಗಿರುತ್ತೇನೆ. ಪ್ರಾಸಾ-1 ರವರೂ ಕೂಡಾ ಹತ್ತಿಕಟ್ಟಿ ಗ್ರಾಮಕ್ಕೆ ಬಂದಿರುತ್ತಾರೆ. ನಾನು ಹತ್ತಿಕಟ್ಟಿ ತಾಂಡಾಕ್ಕೆ ಹೋದಾಗ ಸಮಯ ರಾತ್ರಿ 11.30 ಗಂಟೆಯಾಗಿತ್ತು.

14. ದಿಃ 05.03.2022 ರಂದು ನಾನು ಗದಗ ಜಿಲ್ಲಾ ಆಸ್ಪತ್ರೆಯ ಶವಾಗಾರದಲ್ಲಿ ಪೋಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಆ ಸಮಯದಲ್ಲಿ ಪ್ರಾಸಾ-3, ಚಾಸಾ-4 ಮತ್ತು ಪೋಲೀಸರು ಇದ್ದರು. ನನ್ನ ಹೇಳಿಕೆಯನ್ನು ಪೋಲೀಸರು ಬರೆದುಕೊಂಡಿರುತ್ತಾರೆ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಮತ್ತು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

15. ನಮ್ಮ ಮತ್ತು ಆರೋಪಿ ಮಧ್ಯ ಇರುವ ವೈಯಕ್ತಿಕ ದ್ವೇಷದಿಂದಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇರದೇ ಇದ್ದರೂ ಕೂಡಾ, ಆರೋಪಿಯೇ ಸೋಮಲೆಪ್ಪ ನಾಯಕ ಇವರನ್ನು ಕೊಲೆ ಮಾಡಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

16. ಆರೋಪಿ ಮತ್ತು ಆತನ ಹೆಂಡತಿಯ ಸಂಸಾರ ಚೆನ್ನಾಗಿರಲಿಲ್ಲ ಮತ್ತು ಆತನ ಹೆಂಡತಿಯು ಆರೋಪಿಯೊಂದಿಗೆ ವೈಮನಸ್ಸು ಮಾಡಿಕೊಂಡು ತನ್ನ ತವರು ಮನೆಯಾದ ಚಂದಾಪುರ ಗ್ರಾಮಕ್ಕೆ ಹೋಗಿ ವಾಸ ಮಾಡಿಕೊಂಡಿದ್ದಳು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

17. ಆರೋಪಿಯು ಮೃತ ಸೋಮಲೆಪ್ಪ ನಾಯಕ ಹಾಗೂ ಚಾಸಾ-10 ರಿಂದ 13 ರವರಿಗೆ ತನ್ನ ಸಂಸಾರವನ್ನು ಸರಿಪಡಿಸಬೇಕೆಂದು ಕೇಳುತ್ತಿದ್ದರು ಮತ್ತು ಈ ಬಗ್ಗೆ ಮೃತ ಸೋಮಲೆಪ್ಪ



ನಾಯಕ ಹಾಗೂ ಚಾಸಾ-10 ರಿಂದ 13 ರವರು ಆರೋಪಿಗೆ ಮತ್ತು ಆರೋಪಿಯ ಹೆಂಡತಿಗೆ ಬುದ್ದಿ ಹೇಳಿದ್ದರು ಮತ್ತು ಆದರೂ ಕೂಡಾ ಆತನ ಸಂಸಾರ ಸರಿ ಹೋಗಿರಲಿಲ್ಲ ಮತ್ತು ತನ್ನ ಸಂಸಾರವನ್ನು ಸರಿ ಮಾಡಿರುವುದಿಲ್ಲ ಎಂದು ಆರೋಪಿಯು ಮೃತ ಸೋಮಲೆಪ್ಪ ನಾಯಕ ಇವರ ವಿರುದ್ಧ

ದ್ವೇಷವನ್ನು ಸಾಧಿಸುತ್ತಿದ್ದನು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

18. ದಿಃ 04.03.2022 ರಂದು, ರಾತ್ರಿ 08.30 ಗಂಟೆಗೆ ಮೃತ ಸೋಮಲೆಪ್ಪ ನಾಯಕ, ಚಾಸಾ-11, 12, 13 ಹಾಗೂ ಚಾಸಾ-10 ರವರು ದೇವಸ್ಥಾನದ ಉದ್ಘಾಟನೆ ಮಾಡುವ ಬಗ್ಗೆ ಮಾತನಾಡಲು ಸೇರಿದ್ದರು ಮತ್ತು ಆ ಸಮಯದಲ್ಲಿ ಆರೋಪಿಯು ಅಲ್ಲಿಗೆ ಬಂದು ಮೃತ ಸೋಮಲೆಪ್ಪ ಇವರಿಗೆ ಚಪ್ಪಲಿಯನ್ನು ತೋರಿಸಿ, ನನ್ನ ಸಂಸಾರವನ್ನು ಸರಿ ಮಾಡು ಎಂದು ಹೇಳಿದರೆ, ನೀನು ಇಲ್ಲಿ ಬಂದು ಕುಳಿತಿದ್ದೀಯಾ ಎಂದು, ಕಾಲಿನಿಂದ ಒದ್ದು, ಚಾಕುವಿನಿಂದ ಅವರ ಕುತ್ತಿಗೆಗೆ, ಗದ್ದಕ್ಕೆ, ಹೊಕ್ಕಳಕ್ಕೆ, ಕೈಗೆ ಚುಚ್ಚಿ ಗಾಯಪಡಿಸಿರುತ್ತಾನೆ ಮತ್ತು ಈ ಬಗ್ಗೆ ರಾತ್ರಿ 09.30 ಗಂಟೆ ಸುಮಾರಿಗೆ ನಮ್ಮ ಮನೆಯಿಂದ ನನಗೆ ಫೋನ ಮಾಡಿ ಆರೋಪಿ ಚಾಕು ಚುಚ್ಚಿದ ಬಗ್ಗೆ ತಿಳಿಸಿ, ಮೃತ ಸೋಮಲೆಪ್ಪ ಇವರನ್ನು ಗದಗ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಬರುತ್ತಿರುವುದಾಗಿ ತಿಳಿಸಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

19. ನಾನು ನೇರವಾಗಿ ಗದಗ ಜಿಲ್ಲಾ ಆಸ್ಪತ್ರೆಗೆ ಬಂದಿರುತ್ತೇನೆ ಮತ್ತು ಮೃತ ಸೋಮಲೆಪ್ಪ ಇವರನ್ನು ಪ್ರಾಸಾ-5 ರವರ ಬೋಲೇರೋ ವಾಹನದಲ್ಲಿ ಪ್ರಾಸಾ-1 ಮತ್ತು 6 ರವರು ಕರೆದುಕೊಂಡು ಬಂದಿದ್ದರು ಮತ್ತು ನಾನು ನನ್ನ ಅಣ್ಣನನ್ನು ನೋಡಿದಾಗ, ಆತನು ಮೃತಪಟ್ಟಿದ್ದನು, ಆತನಿಗೆ ಕುತ್ತಿಗೆಗೆ, ಗದ್ದಕ್ಕೆ, ಹೊಕ್ಕಳಕ್ಕೆ ಮತ್ತು ಕೈಗೆ ರಕ್ತ ಗಾಯಗಳಾಗಿದ್ದವು ಮತ್ತು ಆತನ ಬಟ್ಟೆಗೆಲ್ಲಾ ರಕ್ತವಾಗಿತ್ತು ಮತ್ತು ವೈದ್ಯರು ರಾತ್ರಿ 09.45 ಗಂಟೆಗೆ ಮೃತ ಸೋಮಲೆಪ್ಪನನ್ನು ಪರೀಕ್ಷೆ ಮಾಡಿ, ಆತನು ಮೃತಪಟ್ಟಿರುವುದಾಗಿ ಹೇಳಿರುತ್ತಾರೆ ಮತ್ತು ಈ ವಿಷಯದ ಬಗ್ಗೆ ನಾನು ಪ್ರಾಸಾ-1 ಮತ್ತು 6 ರವರನ್ನು ಕೇಳಿರುತ್ತೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

20. ದಿನಾಂಕಃ 05.03.2022 ರಂದು, ಮದ್ಯಾಹ್ನ 01.00 ರಿಂದ 02.00 ರ ಸಮಯದಲ್ಲಿ ನನ್ನ, ಚಾಸಾ-4 ಮತ್ತು ಪ್ರಾಸಾ-3 ರವರ ಸಮಕ್ಷಮ ಮೃತ ಸೋಮಲೆಪ್ಪನ ಶವದ ಪಂಚನಾಮೆಯನ್ನು ಗದಗ ಜಿಲ್ಲಾ ಆಸ್ಪತ್ರೆಯ ಶವಾಗಾರದಲ್ಲಿ ಮಾಡಲಾಗಿರುತ್ತದೆ ಮತ್ತು ಮೃತ ಸೋಮಲೆಪ್ಪನ ಶವವನ್ನು ನಾನು ಗುರುತಿಸಿರುತ್ತೇನೆ ಮತ್ತು ಆ ಸಮಯದಲ್ಲಿ ನಿಪಿ-8 ರಂತೆ ಫೋಟೋವನ್ನು ತೆಗೆಯಲಾಗಿರುತ್ತದೆ ಮತ್ತು ನಿಪಿ-8 ರ ಕ್ರಮ ಸಂಖ್ಯೆಃ 4 ರಲ್ಲಿ ನನ್ನ ಭಾವಚಿತ್ರ ಇರುತ್ತದೆ ಮತ್ತು ಮೃತ ಸೋಮಲೆಪ್ಪನ ಶವದ ಮರಣೋತ್ತರ ಪರೀಕ್ಷೆಯನ್ನು ಮಾಡಲಾಗಿರುತ್ತದೆ ಮತ್ತು ಪರೀಕ್ಷೆಯ ನಂತರ



ಶವವನ್ನು ನನ್ನ ತಾಬಾಕ್ಕೆ ಕೊಡಲಾಗಿರುತ್ತದೆ ಮತ್ತು ಶವವನ್ನು ತೆಗೆದುಕೊಂಡ ಬಗ್ಗೆ ನಾನು ಪಾವತಿ ಬೇಸ್ಮಿಯನ್ನು ಬರೆದುಕೊಟ್ಟಿರುತ್ತೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಗದಗ**